

ಶಶಿಧರ ಹಳೇಮನಿ

# ನೀನೇಕೆ ಬಡವನು?

■ ವಿ. ವಿಜಯೇಂದ್ರ ರಾವ್

ಒಮ್ಮೆ ಒಬ್ಬ ಕಡು ಬಡವನು ಬಂದು ಬುದ್ದನ ಹತ್ತಿರ ನಾನೇಕೆ ಇಷ್ಟು ಬಡವನಾಗಿದ್ದೇನೆ? ಎಂದು ಕೇಳಿದಾಗ, ಬುದ್ಧನು ಯಾಕೆಂದರೆ, ನಿನ್ನಲ್ಲಿ ಉದಾರ ಗುಣವಿಲ್ಲ, ನೀನು ಯಾರಿಗೂ ಏನನ್ನು ಕೊಟ್ಟಿಲ್ಲ ಅದಕ್ಕೆ ಎಂದ.

ಆಗ, ಆ ಬಡವನು ಅಯ್ಯೋ, ನನ್ನ ಹತ್ತಿರಾನೇ ಏನೂ ಇಲ್ಲ, ಇನ್ನು ನಾನೇನು ತಾನೇ ಕೊಡಲಿ ಎಂದಾಗ, ಬುದ್ದನು ಯಾರು ಹೇಳಿದರು ನಿನ್ನ ಬಳಿ ಏನೂ ಇಲ್ಲವೆಂದು ? ನಿನ್ನ ಹತ್ತಿರ ಅಮೂಲ್ಯವಾದ ಐದು ವಸ್ತುಗಳಿವೆ, ಅದನ್ನು ನೀನು ಕೊಟ್ಟರೆ ಸಾಕು ಎಂದಾಗ, ಯಾವುದು ಸ್ವಾಮಿ ಅದು ನಂಗೇ ಗೊತ್ತಿಲ್ಲದ್ದು ಎಂದು ಆಶ್ಚರ್ಯಕರವಾಗಿ ಕೇಳಿದನು. ಆಗ ಬುದ್ಧನು.

ನೋಡಪ್ಪಾ, ಮೊದಲು ನಿನ್ನ ಕಣ್ಣು, ಎಲ್ಲರನ್ನೂ ಕರುಣೆಯಿಂದ, ಪ್ರೀತಿಯಿಂದ ವಿಶ್ವಾಸಪೂರ್ವಕವಾಗಿ ನೋಡಬಹುದು. ಎರಡನೆಯದು ನಿನ್ನ ಬಾಯಿ, ಎಲ್ಲರನ್ನೂ ಒಳ್ಳೆಯ, ಉತ್ತೇಜನ ನೀಡುವ ಮಾತುಗಳಿಂದ ಸಂತೋಷ ನೀಡಬಹುದು. ಮೂರನೆಯದಾಗಿ ನಿನ್ನ ಮುಖ, ಸದಾ ಮುಗುಳ್ನಗೆ ಸೂಸುತ್ತಾ ಎಲ್ಲರ ಮನ ಗೆಲ್ಲಬಹುದು. ನಾಲ್ಕನೆಯದಾಗಿ ನಿನ್ನ ಹೃದಯ, ಸದಾ ಎಲ್ಲರಿಗೂ ಒಳ್ಳೆಯದನ್ನೇ ಬಯಸುತ್ತಾ ಹೃದಯ ವೈಶಾಲ್ಯವನ್ನು ತೋರಬಹುದು. ಐದನೆಯದಾಗಿ ನಿನ್ನ ಶರೀರ, ನಿನಗಿರುವ ಕೈ, ಕಾಲು, ಇತರ ಅಂಗಾಂಗಳಿಂದ ನಿನ್ನ ಕೈಲಾಗುವ ಸಹಾಯವನ್ನು ಅವಶ್ಯಕತೆ ಇರುವವರಿಗೆ ನಿಷ್ಪಕ್ಷಪಾತದಿಂದ ಮಾಡಬಹುದು.

ಇಷ್ಟೆಲ್ಲಾ ಶ್ರೀಮಂತಿಕೆಯನ್ನು ಹೊಂದಿರುವ ನೀನು ಹೇಗೆ ತಾನೇ ಬಡವನಾಗುತ್ತೀಯಾ? ಹೋಗು ಈಗಿನಿಂದಲೇ ನಾನು ಹೇಳಿದ್ದನು ಆಚರಿಸಿ ನೋಡು. ಆಗ ನಿನಗೆ ಗೊತ್ತಾಗುವುದು ನೀನೆಷ್ಟು ಶ್ರೀಮಂತ ಮತ್ತು ಅದರಿಂದ ಸಿಗುವ ಸಂತೋಷಕ್ಕೆ ಬೆಲೆ ಕಟ್ಟಲಾಗುವುದೇ ಇಲ್ಲವೆಂದು ಬುದ್ಧ ಅವನಿಗೆ ತಿಳಿಹೇಳಿದಾಗ ಅವನು ಸಂತೋಷ ಹಾಗೂ ಹುಮ್ಮಸ್ಸಿನಿಂದ ಎದೆಯುಬ್ಬಿಸಿ ಹೊರ ನಡೆದನು. ■